




MANGALORE UNIVERSITY

Accredited by NAAC with 'A' Grade

N. G. Pavanje Chair in Fine Arts

Endowed by Ms Anasuya Pavanje in memory of her father, N.G. Pavanje

and

University First Grade College

Mangalagangothri

cordially invite you to the

ART LITERACY CAMP

on January 29, 2018

from 10 a.m. - 4 p.m.

at Yakshagana Kala Mandira, Mangalagangothri

Prof. K. Byrappa, FRS

Hon'ble Vice Chancellor, Mangalore University

will inaugurate

*Renowned Artists*

Shri P.S. Punchithaya

Shri Ganesha Somayaji

Shri Anantha Padmanabha

Shri Sharath Holla

will be the resource persons.

Please do come and encourage our students.

| Dr. Ravishankar Rao | Dr. Anita Ravishankar | Prof. B.S. Nagendra Prakash |
|---|---|---|
| Coordinator | Principal | Registrar |
| N.G.P.C.F.A. | U.F.G.C. | Mangalore University |










Mangalore University
N.G. Pava
in Fine Arts
Univers
e College
ART
CAMP




N.G. Pavanje Chair in Fine Arts
University First Grade College
Mangalagangothri
ART LITERACY CAMP






ಮಂಗಳೂರು ವಿಶ್ವವಿದ್ಯಾನಿಲಯ ಯಕ್ಷಗಾನ ಕಲಾಕೇಂದ್ರ







# ಮಂಗಳೂರು ವಿವಿಯಲ್ಲಿ ಕಲಾ ಸಾಕ್ಷರತಾ ಶಿಬಿರ ಉದ್ಘಾಟನೆ

■ **ವಿಕ ಸುದ್ದಿಲೋಕ** ಕೊಣಾಜೆ

ವಿದ್ಯಾರ್ಥಿಗಳು ಕಲಾಪ್ರಜ್ಞೆ, ಕಲಾಸಕ್ತಿಯನ್ನು ಬೆಳೆಸಿಕೊಂಡು ಮುನ್ನಡೆದರೆ ಭವಿಷ್ಯದಲ್ಲಿ ನೆಮ್ಮದಿಯುತ ಬದುಕನ್ನು ಕಂಡುಕೊಳ್ಳಲು ಸಾಧ್ಯ ಎಂದು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಭೈರಪ್ಪ ಅಭಿಪ್ರಾಯಪಟ್ಟರು.

ಮಂಗಳೂರು ವಿಶ್ವವಿದ್ಯಾಲಯದ ಎನ್.ಜಿ.ಪಾವಂಜೆ ಪೀಠ ಹಾಗೂ ವಿಶ್ವವಿದ್ಯಾಲಯ ಪ್ರಥಮ ದರ್ಜೆ ಕಾಲೇಜು ಆಶ್ರಯದಲ್ಲಿ ವಿವಿಯ ಯಕ್ಷಗಾನ ಕಲಾಕೇಂದ್ರದಲ್ಲಿ ನಡೆದ ಒಂದು ದಿನದ 'ಕಲಾ ಸಾಕ್ಷರತಾ ಶಿಬಿರ' ಉದ್ಘಾಟಿಸಿ ಅವರು ಮಾತನಾಡಿದರು.

ಕಲೆಯ ಇತಿಹಾಸ, ಕಲಾಕೃತಿ, ಕಲಾಕಾರನ ಜೀವನ ಚರಿತ್ರೆ, ಸಾಧನೆಗಳ ಬಗ್ಗೆ ಅಧ್ಯಯನ ಮಾಡಿದರೆ ಜ್ಞಾನ ಕೌಶಲವನ್ನು ಹೆಚ್ಚಿಸಿಕೊಳ್ಳಬಹುದು. ವಿದೇಶಗಳಲ್ಲಿ ಬಹಳ ವರ್ಷಗಳ ಹಿಂದೆಯೇ ಚಿತ್ರಕಲೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಅಲ್ಲಿಯ ಜನರು ಬೆಳೆಸಿಕೊಂಡು ಅದನ್ನು ಅನುಭವಿಸಿದ್ದರು. ನಮ್ಮಲ್ಲಿ ಕೂಡಾ ಕಲೆಗೆ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದ್ದು, ಕಲಾ ಮನೋಪ್ರಜ್ಞೆಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು. ಕಲಾವಿದನಿಗೂ ಕೂಡಾ ಸಮಾಜದಲ್ಲಿ ಉತ್ತಮ ಮನ್ನಣೆ ಸಿಗಬೇಕಿದೆ ಎಂದು ಅವರು ಹೇಳಿದರು.



ಮಂಗಳೂರು ವಿವಿಯಲ್ಲಿ ನಡೆದ ಕಲಾಸಾಕ್ಷರತಾ ಶಿಬಿರವನ್ನು ಪ್ರೊ.ಕೆ. ಭೈರಪ್ಪ ಉದ್ಘಾಟಿಸಿದರು.

ಮಂಗಳೂರು ವಿವಿ ಕುಲಸಚಿವ ಪ್ರೊ.ಬಿ.ಎಸ್.ನಾಗೇಂದ್ರ ಪ್ರಕಾಶ್ ಮಾತನಾಡಿ, ಕಲೆಯು ಪ್ರತಿಯೊಬ್ಬರಲ್ಲೂ ಜೀವನೋತ್ಸಾಹ ಬೆಳೆಸಿ ಸ್ಫೂರ್ತಿ ನೀಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಕಲೆಯ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು. ಅಲ್ಲದೆ ಇಂತಹ ಶಿಬಿರಗಳಲ್ಲಿ ಯುವ ಸಮುದಾಯ ವಿದ್ಯಾರ್ಥಿಗಳು ಹೆಚ್ಚೆಚ್ಚು ತೊಡಗಿಸಿಕೊಳ್ಳಬೇಕು ಎಂದರು.

ಕಲಾ ಸಾಕ್ಷರತಾ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕಲಾವಿದರಾದ ಪಿ.ಎಸ್.ಪುಣಿಂಚಿತ್ತಾಯ, ಗಣೇಶ ಸೋಮಯಾಜಿ, ಅನಂತ ಪದ್ಮನಾಭ ಹಾಗೂ ಶರತ್ ಹೊಳ್ಳ ಭಾಗವಹಿಸಿದ್ದರು.

ಮಂಗಳೂರು ವಿವಿ ಎನ್.ಜಿ.ಪಾವಂಜೆ ಪೀಠದ ಸಂಯೋಜಕ ಡಾ.ರವಿಶಂಕರ್ ರಾವ್ ಪ್ರಾಸ್ತಾವಿಕವಾಗಿ ಮಾತುಗಳನ್ನಾಡಿದರು. ವಿಶ್ವವಿದ್ಯಾಲಯ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲ್ ಡಾ.ಅನಿತಾ ರವಿಶಂಕರ್ ಹಾಗೂ ಮಂಗಳೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎ.ಎಂ.ಖಾನ್ ಉಪಸ್ಥಿತರಿದ್ದರು.

ಶಿಬಿರದಲ್ಲಿ 72 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಚಿತ್ರಕಲೆಯ ಮೂಲ ಅಂಶಗಳು, ಪರಿಸರ ಚಿತ್ರಗಳು, ಲೈವ್ ಡೆಮೋ, ಕ್ವಿಕ್ ಪೇಂಟಿಂಗ್ ಮುಂತಾದ ವಿಷಯಗಳಲ್ಲಿ ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿದರು.

31/01/2018